## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ  560-2014                    ಸಿ. ಡಬ್ಲುಃ 02**

**ಪಿ. ಡಬ್ಲುಃ 05**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ  ಹೆಸರು<br>ವಯಸ್ಸು<br>ಕೆಲಸ<br>ವಾಸ | ಚಂದ್ರಶೇಖರ್<br>ತಿಮ್ಮಯ್ಯ<br>42 ವರ್ಷ<br>ಚಾಲಕ ಕಂ ನಿರ್ವಾಹಕ<br>ಮರಲೆ ಗ್ರಾಮ, ಚಿಕ್ಕಮಗಳೂರು<br>ಹಾಲಿ ವಾಸ ಚಾಮರಾಜನಗರ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 20-09-2023 |

## ಮುಖ್ಯ ವಿಚಾರಣೆಃ  ಶ್ರೀ. ಎಪಿಪಿ   ವಕೀಲರಿಂದಃ

ಚಾಸಾ-1 ನನಗೆ ಗೊತ್ತು. ಅವರು ಘಟನಾ ದಿನಾಂಕದಂದು ನಮ್ಮ ಬಸ್ಸಿನ ಚಾಲಕರಾಗಿದ್ದರು. ಚಾಸಾ-5 ರಿಂದ 7 ನನಗೆ ಗೊತ್ತು.  ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ನಾನು ಘಟನೆಯಾಗುವ ಪೂರ್ವದ 2 ವರ್ಷದ ಮೊದಲಿಂದಲೂ ನಂಜನಗೂಡಿನ ಕೆ.ಎಸ್.ಆರ್.ಟಿ.ಸಿ ಡಿಪೋದಲ್ಲಿ ನಿರ್ವಾಹಕನಾಗಿ ಕೆಲಸ ನಿರ್ವಹಿಸುತ್ತಿದ್ದೆನು. ದಿ.03-11-2013 ರಂದು  ನನ್ನನ್ನು ಮತ್ತು ಚಾಸಾ-1 ರವರನ್ನು ಕಸುವಿನಹಳ್ಳಿ-ನಂಜನಗೂಡು ಮಾರ್ಗ ಸಂ.ಎಬಿ ಗೆ ವಾಹನ ಸಂ.ಕೆಎ-09-ಎಫ್-4242 ರಲ್ಲಿ ನನ್ನನ್ನು ನಿರ್ವಾಹಕನಾಗಿ ಚಾಸಾ-1 ರವರನ್ನು ಚಾಲಕನಾಗಿ ನೇಮಕ ಮಾಡಿದ್ದರು. ನಾವು ಮೊದಲು  ಕಸುವಿನಹಳ್ಳಿ-ನಂಜನಗೂಡು ಮಾರ್ಗದ ಟ್ರಿಪ್ ಮುಗಿಸಿ ನಂತರ ನಂಜನಗೂಡಿನಿಂದ ಕಸುವಿನಹಳ್ಳಿಗೆ ಹೋಗುವಾಗ ಸಂಜೆ 7.10 ಗಂಟೆ ಸಮಯದಲ್ಲಿ ನಂಜನಗೂಡು ಪಟ್ಟಣ ಚಿಂತಾಮಣಿ ಗಣಪತಿ ದೇವಸ್ಥಾನದ ಬಳಿ ಹೋದಾಗ ಬಸ್ಸಿನ ಪ್ಲಾಟ್ ಫಾರಂ ಬಳಿ ನಿಂತಿದ್ದ ಕೆಎ-09-ಬಿ-3323 ಮಹೇಂದ್ರ ಗೂಡ್ಸ್ ವಾಹನವನ್ನು ಚಾಸಾ-1

ರವರು ತೆಗೆಯಲು ಹೇಳಿದಾಗ ಅದರ ಚಾಲಕ ಚಾಸಾ-1 ರವರಿಗೆ "ರಸ್ತೆ ನಿಮ್ಮ ಅಪ್ಪನದ" ಎಂದು ತೀಟೆ ಜಗಳ ತೆಗೆದು ಟೆಂಪೋದಿಂದ ಇಳಿದು ಬಂದು ಚಾಸಾ-1 ರವರ ಬಲಭುಜ ಹಾಗೂ ಕೆನ್ನೆಗೆ ಹೊಡೆದು ನೋವುಂಟು ಮಾಡಿದ. ನಾನು ಹತ್ತಿರ ಹೋಗಿ ಚಾಸಾ-1 ರವರಿಗೆ ಏಕೆ ಹೊಡೆಯುತ್ತೀಯಾ ಕೇಳಿದಕ್ಕೆ ನನಗೂ ನೀನ್ಯಾರೋ ಕೆಳೋಕೆ ಅಂತಾ ಆರೋಪಿ ಕೆನ್ನಗೆ, ಭುಜಕ್ಕೆ ಮತ್ತು ಎದೆಗೆ ಹೋಡೆದನು. ಆ ಸಮಯ ಆ ದಿನ ಸಂಗ್ರಹಿಸಿದ್ದ ಹಣ ಮತ್ತ ಎ.ಟಿ.ಎಂ ಮಷೀನ್ ಕೆಳೆಗೆ ಬಿದ್ದು ಹೋಯಿತು. ನಂತರ ಅರ್ಜುನ, ಚೆಲುವರಾಜು ಮತ್ತು ಗೋಪಲಾರ್ ರವರ ಜಗಳ ಬಿಡಿಸಿ ಸಮಾಧಾನ ಪಡಿಸಿ ಅವರೇ ಬಿದ್ದು ಹೋಗಿದ್ದ ಹಣವನ್ನು ಎತ್ತಿಕೊಟ್ಟಿರುತ್ತಾರೆ. ನಾನು ಮತ್ತು ಚಾಸಾ-1 ರವರು ಸರ್ಕಾರಿ ನೌಕರರು ಎಂದು ತಿಳಿದಿದ್ದರೂ ಸಹ ನಮ್ಮ ಮೇಲೆ ಜಗಳ ಮಾಡಿ ಹಲ್ಲೆ ಮಾಡಿದ್ದರಿಂದ ನಮ್ಮ ಕರ್ತವ್ಯಕ್ಕೆ ಅಡ್ಡಿ ಆಗಿತ್ತದೆ ಹಾಗೂ ಆ ದಿನ ಬಸ್ಸಿನಲ್ಲಿ ಇದ್ದ ಪ್ರಯಾಣಿಕರಿಗೂ ತೊಂದರೆ ಆಯಿತು. ನಮ್ಮ ಹಲ್ಲೆ ಮಾಡಿದ ವ್ಯಕ್ತಿ ಅಸ್ಸರ್ ಗುಂಡ್ಲುಪೇಟೆ ವಾಸಿ ಎಂದು ಗೊತ್ತಾಯಿತು. ಸದರಿ ವ್ಯಕ್ತಿಯೂ ಈ ದಿನ ನ್ಯಾಯಾಲಯದ ಮುಂದೆ ಇದ್ದು, ಘಟನಾ ದಿನಾಂಕಂದು ನಮ್ಮ ಮೇಲೆ ಹಲ್ಲೆ ಮಾಡಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ವ್ಯಕ್ತಿ ಆರೋಪಿಯೇ ಎಂದು ಗುರುತಿಸಿರುತ್ತಾರೆ. ಘಟನೆ ನಂತರ ನಾನು ಚಾಸಾ-1 ರವರು ಠಾಣೆಗೆ ಹೋಗಿ ಆನಂತರ ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಗೋಪಾಲಗೌಡ ಆಸ್ಪತ್ರೆಗೆ ಹೋಗಿರುತ್ತೇವೆ. ನಾನು ಸುಮಾರ 7 ದಿನಗಳ ಕಾಲ ಗೋಪಾಲಗೌಡ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆನು. ತದನಂತರ ನಾನು ಮತ್ತು ಚಾಸಾ-1 ರವರ ಅನುಮತಿ ಪಡೆದು ನಂಜನಗೂಡಿನ ಪಟ್ಟಣ ಠಾಣೆಗೆ ಬಂದು ದೂರು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದು ದೂರು ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಈ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್.ಆರ್ ವಕೀಲರಿಂದಃ**

ನಾನು ದ್ವಿತಿಯ ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದೂರನ್ನು ಡಿಪೋ ಮ್ಯಾನೇಜರ್ ಬರೆದಿದ್ದು ಅದಕ್ಕೆ ನಾವು ಸಹಿ ಮಾಡಿರುತ್ತೇವೆ. ಘಟನ ದಿನಾಂಕದಂದು ನಮ್ಮ ಬಸ್ಸಿನಲ್ಲಿ

ಸುಮಾರು 35-40 ಜನ ಪ್ರಯಾಣಿಕರು ಇದ್ದರು. ನಾನು ಬಸ್ ನಿಲ್ದಾಣದಲ್ಲಿ ಹತ್ತಿದ ಪ್ರಯಾಣಿಕರಿಗೆ ಟಿಕೆಟ್ ಅನ್ನು ನೀಡಿದ ಘಟನಾ ಸ್ಥಳದಲ್ಲಿ ಹತ್ತಿದ ಪ್ರಯಾಣಿಕರಿಗೆ ಟಿಕೆಟ್ ನೀಡುತ್ತಾ ಬಸ್ಸಿನ ಮಧ್ಯಭಾಗದಲ್ಲಿ ಇದ್ದೆನು. ಸದರಿ ದಿನಾಂಕದಂದು ಚಾಸಾ-1 ರವರ ಚಾಲನೆ ಮಾಡುತ್ತಿದ್ದ ಬಸ್ಸಿಗೆ 2 ಬಾಗಿಲುಗಳು ಇದ್ದವು. ಘಟನಾ ದಿನಾಕದಂದು ಎರಡೂ ಬಾಗಿಲುಗಳಿಂದ ಪ್ರಯಾಣಿಕರು ಹತ್ತುತ್ತಿದ್ದುದ್ದರಿಂದ ಪ್ರಯಾಣಿಕರ ದಟ್ಟಣೆ ಇತ್ತು ಎಂದರೆ ಸರಿಯಲ್ಲ. ನಾನು ಬಸ್ಸಿನ ಮಧ್ಯಭಾಗದಲ್ಲಿ ಇದ್ದುದ್ದರಿಂದ ನಾನು ಬಸ್ಸಿನಿಂದ ಕೆಳಗೆ ಇಳಿದಿರುವುದಿಲ್ಲ ಮತ್ತು ಆರೋಪಿ ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ ಬಸ್ಸಿನಿಂದ ಇಳಿದು ಆರೋಪಿಯನ್ನು ಚಾಸಾ-1 ರವರಿಗೆ ಏಕೆ ಹಲ್ಲೆ ಮಾಡುತ್ತಿದ್ದೀಯಾ ಎಂದು ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಘಟನಾ ದಿನಾಂಕಂದು ಆರೋಪಿ ನನಗಾಗಲಿ ಹಾಗೂ ಚಾಸಾ-1 ರವರಿಗಾಗಲಿ ಹಲ್ಲೇ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಬಸ್ಸಿನಲ್ಲಿ ಇದ್ದ ಪ್ರಯಾಣಿಕರಿಗೆ ನಮ್ಮ ಡಿಪೋ ಮ್ಯಾನೇಜರ್ ಬೇರೆ ಬಸ್ಸಿನ ವ್ಯವಸ್ಥೆ ಮಾಡಿ ಕಳುಹಿಸಿಕೊಟ್ಟು ನಂತರ ನಮ್ಮನ್ನು ಚಿಕಿತ್ಸೆಗೆ ಕಳುಹಿಸಿಕೊಟ್ಟಿರುತ್ತಾರೆ. ನಾನು ಹೇಳುವಂತೆ ಘಟನಾ ದಿನಾಂಕದಂದು ಆರೋಪಿ ನನಗಾಗಲಿ ಚಾಸಾ-1 ರವರಿಗಾಗಲಿ ಹಲ್ಲೆ ಮಾಡಿರುವುದಿಲ್ಲ, ನಾವೇ ಆರೋಪಿಯ ಹಲ್ಲೆ ಮಾಡಿ ಅದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನನಗಾಗಲಿ, ಚಾಸಾ-1 ರವರಿಗಾಗಲಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**